ಮಗಳು ಚೆನ್ನಾಜಿ ದಿನವೂ ತಡವಾಗಿ ಬರುವುದಿತ್ತಲ್ಲ; ಬಂದ ನಂತರ ಅನ್ನ ಬೇಯಿಸುವುದು ಅವಳಿಗೆ ಕಷ್ಟವಾಗಬಹುದೆಂದು ರಾಮಯ್ಯನೇ ಸಣ್ಣ ಬಟ್ಟಲು ಕುಕ್ಕರ್ ಕೂಗಿಸಿ, ಅಲ್ಲಿಂದ ಟಿಫನ್ ಕ್ಯಾರಿಯರ್ ಕೊಂಡುಹೋಗಿ ಹೆದ್ದಾರಿ ಬದಿಯ ಫಾಸ್ಟ್‌ಫುಡ್‌ನವರಿಂದ ಸಾಂಬಾರು ತರುತ್ತಿದ್ದ. ಮಗಳು ಬರದೇ ರಾಮಯ್ಯ ಬಾಯಿಗೆ ನೀರು ಬಿಟ್ಟದ್ದಿಲ್ಲ. ಬಂದವಳನ್ನು ಕಣ್ಣಿಂದ ಕಂಡ ಮೇಲೆಯೇ ಉಣ್ಣುವುದು. ಅಲ್ಲಿಂದ ಮಲಗುವಲ್ಲಿ ಅವಳ ಮದುವೆಯ ಚಿಂತೆ. ಒಂದೊಂದು ದಿನ ಇರಸವಾಡಿಯಿಂದ ಬರುವ ನಾದಿನಿ ಶಿವಮ್ಮ – 'ಭಾವ, ಊರಾಗೆ ಇಬ್ರು ಹುಡುಗರು ಅವರೆ. ಬಿ.ಎ. ಮಾಡವರೆ. ಹೊಲ ಮನೆ ಅದೆ. ಬಂದು ನೋಡು ಬಾ' ಅಂದರೆ ಅಪ್ಪ ಬಾಯಿ ತೆಗೆಯುವ ಮೊದಲೇ ಚೆನ್ನಾಜಿ, 'ಚಿಕ್ಕಮ್ಮ ಅವರಿಬ್ಬರಿಗೂ ಅಲ್ಲೇ ಯಾರ‍್ನಾರ ನೋಡು, ನಂಗೆ ಬ್ಯಾಡ' ಅನ್ನುವಳು. ಶಿವಮ್ಮ 'ಇಲ್ಲೇ ಬಣ್ಣದ ಮಾಲಿಗೆ ಬತ್ತರಲ್ಲ... ಅವರನ್ನೇ ಯಾರ‍್ನಾರ ಕಟ್ಕಂಡು ನೀನು ಸಿನಿಮಾ ನಾಟಕದವರ ಥರ ವಾಲಾಡಬೇಕು ಅಂತ ಅಂದ್ಕಂಡಿದೀಯಾ' ಅಂದು ಸಿಟ್ಟು ಮಾಡಿದರೆ, ರಾಮಯ್ಯನಿಗೂ ಅದೇ ಥರದಲ್ಲಿ ಅಸಮಾಧಾನ ಏರುವುದು.

ಮಾಲಿಗೆ ಬರುವ ಯಾವನಾದರೂ ಚಂದದ ಟೆಕ್ಕಿಯು ತನಗೆ ಪ್ರೇಮದ ಕರೆಯೋಲೆ ಕೊಟ್ಟು ಬೆಂಗಳೂರಿನ ಹೆದ್ದಾರಿಯಲ್ಲಿ ಕರೆದೊಯ್ಯುವನೇ ಎಂಬ ಆಸೆ ಚೆನ್ನಾಜಿಗೆ ಇರುವುದು ನಿಜ. ಆದರೆ ಈ ಜನ್ಮದಲ್ಲಿ ಅದು ಸಾಧ್ಯವಿಲ್ಲ ಎಂಬ ವ್ಯಥೆಯೂ ಅಲ್ಲೇ ಹುಟ್ಟಿಕೊಳ್ಳುತ್ತದೆ. ತಾನು ಎಸ್‌ಎಸ್‌ಎಲ್‌ಸಿಯ ಮುಂದಿನ ಹಂತವನ್ನೇ ತುಳಿಯಲಿಲ್ಲವಲ್ಲ ಯಾಕೆ ಎಂಬ ಒಳಗುದಿಯೂ ತುಂಬಿಕೊಳ್ಳುವುದು. ಎಷ್ಟು ದಿನ ಈ ಮಾಲಿನ ಗಲ್ಲಾಪೆಟ್ಟಿಗೆಯ ಮುಂದೆ ನಿಂತು ಹಲ್ಲು ಕಿರಿಯುವುದು? ಅದು ಸರಿ, ಒಂದು ಸರ್ತಿ ಬಂದ ಹುಡುಗ ಇನ್ನೊಂದು ಸರ್ತಿ ಇನ್ನೊಬ್ಬಳೊಡನೆ ಬರುವವನಲ್ಲ! ಆ ಇನ್ನೊಬ್ಬಳು ಮತ್ತೊಬ್ಬನೊಂದಿಗೆ ಬರುವುದನ್ನೂ ಕಂಡಿರುವೆನಲ್ಲ ಎಂಬೀ ಆಲೋಚನೆಯೊಂದಿಗೆ, ದಸರಾದಲ್ಲಿ ಕುಸ್ತಿ ಹಿಡಿಯುತ್ತಿದ್ದ ಅಪ್ಪನನ್ನು ಲಗ್ನವಾದ ಅವ್ವ ತಾನು ಹುಟ್ಟುತ್ತಲೇ ಸತ್ತಳೇ, ಯಾಕೆ ಸತ್ತಳು? ಚಿಕ್ಕಮ್ಮ ಅಪ್ಪನ ಸಂಬಂಧ ಯಾವ ಥರದ್ದು ಎಂಬ ನಾನಾ ಬಗೆಯ ಗೊಂದಲಗಳು ಚೆನ್ನಾಜಿಯ ಎಳೆಯ ಪ್ರಾಯದ ಅನುಭವಕ್ಕೆ ಇಣುಕುವಂತಿವೆ. ಯಾರೊಂದಿಗೂ ಆಡಲಾಗದ ಇದನ್ನು ಶ್ರೀನಿವಾಸನಲ್ಲಿ ಹೇಳಿಕೊಳ್ಳುವಳು. ಶ್ರೀನಿವಾಸನೂ ಅಪ್ಪನ ಮುಂದೆ ಷೋರೂಂನಲ್ಲಿ ನಾನಾ ಬಗೆಯ ದೇವರ ವಿಗ್ರಹ ಮಾರುವುದು ತನ್ನ ಕಾಯಕ ಎಂದು ಹೇಳಿಯೇ ಇಲ್ಲ. ಮಾಡುತ್ತಿರುವ ಕೆಲಸ ನಿತ್ಯ ಬೋರು ಹೊಡೆಸುವಂಥದ್ದು ಎಂದು ಚೆನ್ನಾಜಿಯು, ಶ್ರೀನಿವಾಸನೂ ಅಪ್ಪಂದಿರಿಗೆ ಹೇಳಿಯೇ ಇಲ್ಲ. ಶೀನಿಯ ಮದುವೆಯ ವಿಚಾರದಲ್ಲಿ ಅವನ ಮನೆಯಲ್ಲೂ ಅದೇ ಗೊಂದಲ, ಜಗಳ.

ಅವತ್ತು ರಾತ್ರಿ ಒಂಬತ್ತರ ಹೊತ್ತಿಗೆ ಬಂದ ಚೆನ್ನಾಜಿಯ ಮುಂದೆ ರಾಮಯ್ಯ ಬೆಳಿಗ್ಗೆ ಪೂಜಾರಪ್ಪನೊಂದಿಗೆ ಆದ ಮಾತುಕತೆಯನ್ನು ಮಂಡಿಸಿದ. ಚೆನ್ನಾಜಿ ಕಡ್ಡಿ ಮುರಿದಂತೆ 'ನಿನ್ನ ಹಳೇ ಮಿಷೀನು, ಗಜಗಡ್ಡಿಯಿಂದ ಅಲ್ಲಿಗೆ ಬರವರ ಬಟ್ಟೆ ಅಳತೆ ಮಾಡಕಾಗಲ್ಲ, ಹೊಲಿಯಕಾಗಲ್ಲ ಕಣಪ್ಪ' ಅಂದಳು. ರಾಮಯ್ಯ 'ನೀ ಅನ್ನದು ನಿಜವೇ, ನನ್ನ ಹಳೆ ಮಿಷೀನು ಇವತ್ತಿಗೆ ಅಡ್ಜಸ್ಟ್ ಆಗಲ್ಲ ಬುಡು' ಅಂದು ನಿಟ್ಟುಸಿರು ಬಿಟ್ಟು ನಿದ್ದೆಗೆ ಸಂದ.

* * *

ಅದೇ ಮುಂದಿನ ವಾರದ ರಾತ್ರಿ ಒಂಬತ್ತು ಗಂಟೆಯಲ್ಲಿ ಜನವೇ ಓಡಾಡದ ಖಾಲಿ ಊರಿನ ಬೀದಿಯಲ್ಲಿ ಇದ್ದಕ್ಕಿದ್ದಂತೆಯೇ ಎರಡು ಕಾರು ಬಂದವೆಂದರೆ ಆಶ್ಚರ್ಯ! ಬಂದ ಕಾರಿನ ಮಂದಿ ರಾಮಯ್ಯನ ಮನೆಯ ಮುಂದೆ ನಿಂತರೆ, ಇನ್ನೊಂದು ಕಾರು ಪೂಜಾರಪ್ಪನ ಮನೆ ಮುಂದಾಯಿತು. ಅತ್ತ ಲೈಟು ಕಂಬದ ಬೆಳಕಿನಲ್ಲಿ ಬಂದವರ ಮುಖ ಸರಿಯಾಗಿ ಕಾಣಿಸುತ್ತಿಲ್ಲ. ಮುಂದೆ ನಿಂತವನ ಮುಖದಲ್ಲಿ ಹಣೆಯ ಉದ್ದಕ್ಕೆ ಎಳೆದಿದ್ದ ಕುಂಕುಮ. ತಲೆಯ ಹಿಂದಿನ ಉದ್ದ ಕೂದಲ ಗಂಟು. ಎದುರಾದವನು 'ನಮಸ್ಕಾರ ಕಣಪ್ಪ' ಅಂದ. ರಾಮಯ್ಯ ಕಿರುಗಣ್ಣಲ್ಲಿ ನಿಂತವರನ್ನು ಪತ್ತೆ ಹಚ್ಚುವ ಪ್ರಯತ್ನದಲ್ಲಿ 'ನೀವ್ಯಾರಪ್ಪ ಇಷ್ಟೊತ್ತಿನಲ್ಲಿ' ಅಂದ.

'ಅದೇ ನಮ್ಮ ಈ ಮಾಲಿನ ಧಣಿಗಳು ನಿಮ್ಮತ್ರ ಕಳಿಸಿದ್ರು ಅಪ್ಪಾಜಿ.'

ಬಂದವರು ಅದೆಷ್ಟು ಮರ್ಯಾದೆ ತೋರುತ್ತಿರುವರೆಂದು ರಾಮಯ್ಯನಿಗೆ ಒಂದು ಗುಲಗಂಜಿ ತೂಕದಷ್ಟು ಸಂತಸ ಹೆಚ್ಚಾದಂತೆ ಕಂಡಿತು. ಹೋದ ಸರ್ತಿ ಕೈಯಲ್ಲಿ ಕತ್ತರಿ, ಗಜಗಡ್ಡಿ ಬೆದರಿಕೆ ಹಾಕಿದ್ದಕ್ಕೆ ಓನರು ಹೆದರಿ ಈ ಪ್ಯಾದೆಗಳನ್ನು ಕಳಿಸಿಕೊಟ್ಟಿರುವನಲ್ಲ ಅಂದುಕೊಳ್ಳುತ್ತ 'ಏನ್ರಪ್ಪ ವಿಷಯ' ಅಂದ.

ಎದುರು ನಿಂತವನು 'ಅದೇ ಕಣಪ್ಪ... ನೀವು ಮನೆ ಖಾಲಿ ಮಾಡಿದರೆ ನಿಮ್ಮ ಜಾಗದ ರೇಟು ಎಷ್ಟು ಅಂತ ಓನರು ಕೊಡ್ತರೆ. ನೀವು, ಪೂಜಾರಪ್ಪನವರು ಇಲ್ಲಿದ್ದು ಇನ್ನೇನು ತಾನೆ ಮಾಡೀರಿ. ಸಿಟಿ ಕಡೆ ಬಾಡಿಗೆ ಮನೆ ನೋಡಿಕೊಂಡು ಹೋಗಿಬಿಡಿ. ನೀವು ನಿಮ್ಮ ಜಾಗಾನ ಟೋಟಲ್ಲಾಗೇ ನಮ್ಮ ಇಂದ್ರಾಮಾಲಿಗೆ ಬಿಟ್ಟುಕೊಡಬೇಕಂತೆ. ಒಂದು ಸ್ಟಾರ್ ಹೋಟೆಲು ಏಳಸ್ತಾರೆ. ಅದಕ್ಕೆ ಇಲ್ಲಿತಂಕ ಕಾಂಪೌಂಡು ಹಾಕಿಲ್ಲ...' ಮಾತಾಡುತ್ತಿದ್ದುದು ಕುಂಕುಮದವನೇ ಆದರೂ ಉಳಿದಿಬ್ಬರು ಅತ್ತ ಇತ್ತ ಕೆಂಪು ಕಣ್ಣು ಬಿಟ್ಟು ಗುರಾಯಿಸುತ್ತಿದ್ದರು. ಮಾತಿನಿಂದ ಮಾತಿಗೆ ಬಿಗಿಯಾಗುತ್ತಿದ್ದವನು, 'ನಿಮ್ಮ ಜಾಗಾನ ಫ್ರೀಯಾಗೇನು ಕೊಡು ಅಂತಿಲ್ಲ ನಾವು. ರೇಟು ಹೇಳಿಬಿಡಪ್ಪಜಿ, ದುಡ್ಡು ಎಣಿಸ್ಕೋ' ಅಂದ.

ರಾಮಣ್ಣನ ಮುಖ ಬಿಸಿಯಾಗುತ್ತಿತ್ತು. ಬಿಡುವ ಉಸಿರಿನಲ್ಲಿ ಕೋಪ ಹೊಗೆಯಾಡುತ್ತಿತ್ತು. ಕುಂಕುಮದ ಆಳು 'ಕೋಪ ಬ್ಯಾಡಕಣಪ್ಪ' ಅಂದ. ಹಾಗಂದರೂ ಅವನ ಮಾತಿನ ವರಸೆ 'ಬೇಕಾದರೆ ಕೋಪ ಮಾಡಿಕೋ, ಅದನ್ನು ನಾವು ಕೇಳಲು ಬಂದಿಲ್ಲ' ಎಂಬಂತಿತ್ತು. ಬರಿಯ ಅಂಗಳವಲ್ಲದೆ ಇದ್ದ ಮನೆಯನ್ನೇ ಕಿತ್ತುಕೊಂಡು ಗುಳೆ ಹೋಗು ಎನ್ನುತ್ತಿದ್ದಾನಲ್ಲ ಎಂಬ ಕಾರಣಕ್ಕೆ ರಾಮಯ್ಯನಿಗೆ ನೆತ್ತಿ ಉರಿಯಿತು.

ರಾಮಯ್ಯ 'ನಾನು ಅರಮನೆ ಮುಂದೆ ಕುಸ್ತಿ ಹಿಡಿದು ಗೆದ್ದವನು. ಅದೆಲ್ಲಿಂದಲೋ ಬಂದು ನಮ್ಮ ತಾತ, ಅಪ್ಪ ಎಲ್ಲ ಹುಟ್ಟಿ ಬೆಳೆದ ಜಾಗದಲ್ಲೇ ನೀನು ನಿಂತು ಖಾಲಿ ಮಾಡು ಅಂತಿದ್ದೀಯಲ್ಲ, ನಿಮ್ಮ ಓನರು ಎಲ್ಲವನೇ ತೋರ‍್ಸಲೆ, ಎಷ್ಟು ಊರುಕೇರಿ ಹಿಂಗೆ ನುಂಗಾಕಿ ಬಂದಿದ್ದೀರ‍್ರಲಾ ಬೋಸುಡಿ ಮಕ್ಕಳಾ, ನೀವು ಯಾವ ಊರ ದರವೇಸಿಗಳಲೇ, ನನ್ನ ಮುಂದೆ ಹಿಂಗೆ ನಿಂತು ಮಾತಾಡ್ತಾ ಇದ್ದೀರಲ್ಲ' ಅಂದು ಸ್ಯಾನೇ ರಾಂಗಾದ!



* * *

ಅವತ್ತು ಭಾನುವಾರವಾಗಿ ಮಾಲಿನಿಂದ ಚೆನ್ನಾಜಿ ಬರುವುದು ರಾತ್ರಿ ಹನ್ನೊಂದಾಯಿತು. ಮನೆಯ ಬಾಗಿಲು ತೆರೆದಿದೆ. ಅಪ್ಪ ಇಲ್ಲ! ಟೈಲರಿಂಗ್ ಮಿಷೀನು ಉರುಳಿದೆ. ಸ್ಟೂಲು ತಲೆಕೆಳಗಾಗಿದೆ. ಗಾಬರಿಗೊಂಡು ಯಾರಿಗಾದರೂ ಮೊಬೈಲ್ ಕರೆ ಮಾಡೋಣವೆಂದರೆ ಚೆನ್ನಾಜಿ ಅದನ್ನು ಷೋರೂಂನಲ್ಲೇ ಬಿಟ್ಟು ಬಂದಿದ್ದಾಳೆ. ಏನು ಮುಟ್ಟಲು ಹೋದರೂ ಕೈ ನಡುಗುತ್ತಿದೆ. ಎದೆಬಡಿತ ಜೋರಾಗುತ್ತಿದೆ. ಅತ್ತ ಮಾಲಿನ ಮಹಡಿಯಲ್ಲಿ ಹುಡುಗ ಹುಡುಗಿಯರ ಕುಣಿತ. ಬೀದಿಯಲ್ಲಿ ಜನರ ಸುಳಿವೇ ಇಲ್ಲ. ಶ್ರೀನಿವಾಸನನ್ನು ಕರೆಯೋಣವೆನಿಸಿತು. ಗಂಟಲಲ್ಲಿ ದನಿಯೇ ಏಳುತ್ತಿಲ್ಲ. ನೆಲದಲ್ಲಿ ರಕ್ತದ ಕಲೆ ಹಸಿಯಾಗಿಯೇ ಇದೆ. ಏನೋ ನಡೆದುಬಿಟ್ಟಿದೆ ಅಂದುಕೊಳ್ಳುವಲ್ಲಿ; ಆ ಕಡೆಯಿಂದ ತನ್ನ ಮನೆಗೂ ಬಂದವರು ಇಲ್ಲಿ ಏನು ಮಾಡುತ್ತಿರಬಹುದೆಂದು ಶ್ರೀನಿವಾಸ ಗಾಬರಿ ಬಿದ್ದು ಬಂದರೆ, ಚೆನ್ನಾಜಿ ಇನ್ನೇನು ತಲೆ ಸುತ್ತಿ ಬೀಳುವಂತಿದ್ದಾಳೆ. ಶ್ರೀನಿವಾಸ ಹಿಡಿದುಕೊಂಡ.

* * *

ಆಗೀಗ ದಿನಪತ್ರಿಕೆಯಲ್ಲಿ 'ಇಂದ್ರಾಮಾಲಿನ ಸನಿಹದಲ್ಲಿ ನಾಪತ್ತೆಯಾದ ಟೈಲರ್ ರಾಮಯ್ಯನ ತನಿಖೆ ಮುಂದುವರೆದಿದೆ' ಎಂಬ ಸುದ್ದಿ ಬರುವುದು. ಅದೇ ಪತ್ರಿಕೆಗಳಲ್ಲಿ, 'ಮುಂಬರುವ ಹನುಮ ಜಯಂತಿಯಂದು ಇಂದ್ರಾಮಾಲಿನ ವಿಶಾಲ ಅಂಗಳದಲ್ಲಿ ಕೋದಂಡರಾಮನೇ ಅಲ್ಲದೆ, ವಾಯುವೀರ ಪುತ್ರ ಹನುಮಂತನ ಆರು ಅಡಿ ಉದ್ದದ ಕಂಚಿನ ವಿಗ್ರಹಗಳ ಪ್ರತಿಷ್ಠಾಪನಾ ಮಹೋತ್ಸವವು, ಅದರ ಸಾಂಗೋಪಾಂಗ ಅರ್ಚನೆ, ವಿಧಿ ವಿಧಾನಗಳಲ್ಲಿ ನೆರವೇರುವುದು. ಅತಿಥಿಗಳು, ಜಿಲ್ಲಾ ಉಸ್ತುವಾರಿ ಸಚಿವರು. ಎಲ್ಲಾ ಆಸ್ತಿಕ ಮಹಾಶಯರಿಗೆ ಆದರಪೂರ್ವಕ ಆಹ್ವಾನ' ಎಂಬ ಜಾಹೀರಾತು ಕಾಣಿಸುವುದು.